76 ಎಕರೆ 27 ಗುಂಟೆ ಜಮೀನಿನ ಅವಶ್ಯಕತೆಯಿರುತ್ತದೆ. ಇಲ್ಲಿಯವರೆಗೆ 64 ಎಕರೆ 24 ಗುಂಟೆ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕೆ 34.72 ಲಕ್ಷ ರೂ.ಗಳ ವೆಚ್ಚವಾಗಿದೆ. ಉಳಿಕೆ 7.24 ಲಕ್ಷ ರೂ.ಗಳು ಪಾವತಿ ಮಾಡಬೇಕಿದೆ.

ಆ) ತುಮಕೂರು-ಹೊನ್ನಾವರ ರಸ್ತೆಯು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲಿರುವುದರಿಂದ, ತಿಪಟೂರಿನ ಹೊರ ವಲಯ ರಸ್ತೆಗೆ ಕೇಂದ್ರ ಸರ್ಕಾರದ ಅನುದಾನವನ್ನಾಧರಿಸಿ, ಕೆಲಸ ಪ್ರಾರಂಭಿಸಲಾಗುವುದು.

ಅರಣ್ಯ ಇಲಾಖೆಯಲ್ಲಿ ವಾಹನಗಳ ಮುಟ್ಟುಗೋಲು

484 - ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಣ್ಯ ಇಲಾಖೆ ಕಳೆದ 3 ವರ್ಷಗಳಲ್ಲಿ ಮುಟ್ಟುಗೋಲು ಹಾಕಿಕೊಂಡ ವಾಹನಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು).

ಆ) ಮುಟ್ಟುಗೋಲು ಹಾಕಿಕೊಂಡ ವಾಹನಗಳನ್ನು ಎಷ್ಟು ಅವಧಿಯೊಳಗೆ ವಿಲೇವಾರಿ ಮಾಡಲಾಗುವುದು ?

ಇ) ಇಲಾಖೆಯ ವಶದಲ್ಲಿರುವ ನಿರುಪಯೋಗವಾಗಿ ಬಿದ್ದಿರುವ ವಾಹನಗಳ ಸಂಖ್ಯೆ ಎಷ್ಟು ?

ಈ) ಇವುಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ ಕಳೆದ 3 ವರ್ಷಗಳಲ್ಲಿ ಅಂದರೆ 1994-95ರಿಂದ 1996-97ನೇ ಸಾಲಿನಲ್ಲಿ ಮುಟ್ಟುಗೋಲು ಹಾಕಿಕೊಂಡ ವಾಹನಗಳ ಜಿಲ್ಲಾವಾರು ವಿವರಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಆ) ಮುಟ್ಟುಗೋಲು ಹಾಕಿಕೊಂಡ ವಾಹನಗಳನ್ನು ಸರಕಾರದ ಪರ ಅಮಾನತ್ತುಪಡಿಸಿಕೊಂಡು ನಂತರ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71 ಎ ಪ್ರಕಾರ ವಾಹನಗಳನ್ನು ಟೆಂಡರ್ - ಕಂ - ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ಇ) ಮೇಲ್ಕಂಡ ಮೂರು ವರ್ಷಗಳಲ್ಲಿ ವಿಲೇವಾರಿ ಆಗಿ ಹರಾಜಿಗೆ ಬಾಕಿ ಇರುವ ವಾಹನಗಳು ಈ ಕೆಳಕಂಡಂತೆ ಇರುತ್ತವೆ.

1994-95	44 ವಾಹನಗಳು
1995-96	234 ವಾಹನಗಳು
1996-97	110 ವಾಹನಗಳು

ಈ) ಹೌದು.

ಮುಟ್ಟುಗೋಲು ಹಾಕಿಕೊಂಡಿರುವ ವಾಹನಗಳ ಜಿಲ್ಲಾವಾರು ವಿವರಗಳ ಪಟ್ಟಿ

ಕ್ರ. ಸಂ.	ಜಿಲ್ಲೆಗಳ ಹೆಸರುಗಳು	1994-95			1995-96			1996-97		
		ಮುಟ್ಟುಗೋಲು ಹಾಕಿ ಇಟ್ಟುಕೊಂಡಿರುವ ವಾಹನಗಳ ಸಂಖ್ಯೆ	ವಿಲೇವಾರಿಯಾಗಿ ಬಿಡುಗಡೆಯಾಗಿರುವ ವಾಹನಗಳ ಸಂಖ್ಯೆ	ಉಳಿಕೆ	ಮುಟ್ಟುಗೋಲು ಹಾಕಿ ಇಟ್ಟುಕೊಂಡಿರುವ ವಾಹನಗಳ ಸಂಖ್ಯೆ	ವಿಲೇವಾರಿಯಾಗಿ ಬಿಡುಗಡೆಯಾಗಿ ಸಂಖ್ಯೆ	ಉಳಿಕೆ	ಮುಟ್ಟುಗೋಲು ಹಾಕಿ ಇಟ್ಟುಕೊಂಡಿರುವ ವಾಹನಗಳ ಸಂಖ್ಯೆ	ಬಿಡುಗಡೆಯಾಗಿರುವ ಸಂಖ್ಯೆ	ಉಳಿಕೆ
1	2	3	4	5	6	7	8	9	10	11
1.	ಶಿವಮೊಗ್ಗ	50	46	4	212	52	160	121	165	16
2.	ಚಿಕ್ಕಮಗಳೂರು	97	87	10	96	89	7	47	33	14
3.	ಬೆಳಗಾಂ	2	-	2	1	-	1	1	-	1
4.	ಬಿಜಾಪುರ	-	-	-	-	-	-	1	-	1
5.	ಕೊಡಗು	16	12	4	26	3	23	4	-	4
6.	ಧಾರವಾಡ	8	-	8	10	-	10	36	-	36
7.	ದಕ್ಷಿಣ ಕನ್ನಡ	42	38	4	26	23	3	39	18	21
8.	ಉತ್ತರ ಕನ್ನಡ (ಕಾರವಾರ)	9	6	3	8	5	3	8	7	1
9.	ಮೈಸೂರು	4	1	3	17	-	17	17	16	1
10.	ಮಂಡ್ಯ	-	-	-	-	-	-	8	-	8
11.	ಹಾಸನ	-	-	-	25	20	5	24	18	6

1	2	3	4	5	6	7	8	9	10	11
12.	ಬೆಂಗಳೂರು (ನಗರ)	7	7	-	4	3	1	2	1	1
13.	ಬೆಂಗಳೂರು (ಗ್ರಾಮಾಂತರ)	5	5	-	7	6	1	-	-	-
14.	ಕೋಲಾರ	2	2	-	2	2	-	-	-	-
15.	ತುಮಕೂರು	5	3	2	3	2	1	-	-	-
16.	ಚಿತ್ರದುರ್ಗ	7	3	4	-	-	-	-	-	-
17.	ಬಳ್ಳಾರಿ	-	-	-	1	1	-	-	-	-
18.	ರಾಯಚೂರು	-	-	-	2	-	2	-	-	-
19.	ಬೀದರ್	-	-	-	-	-	-	-	-	-
20.	ಗುಲ್ಬರ್ಗ	-	-	-	-	-	-	-	-	-
ಒಟ್ಟು		**254**	**210**	**44**	**440**	**206**	**234**	**308**	**198**	**110**